International Journal of Kannada Research
www.kannadajournal.com

ISSN: 2454–5813
IJSR 2017; 3(1): 174-177
© 2017 IJKS
www.kannadajournal.com
Received: 23-11-2016
Accepted: 26-12-2016

**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಧ್ಯಾಪಕರು,
ಸ.ಪ್ರ.ದ.ಕಾಲೇಜು ಚನ್ನಪಟ್ಟಣ,
ರಾಮನಗರ ಜಿಲ್ಲೆ, ಕರ್ನಾಟಕ,
ಭಾರತ

# ರಾವಂದೂರು ಗ್ರಾಮದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ ಕುರಿತ ಸಮೀಕ್ಷೆ

**ಡಾ. ಎಸ್.ಕೆ.ದೇವೆಗೌಡ**

**DOI:** https://doi.org/10.22271/24545813.2017.v3.i1c.848

**ಪೀಠಿಕೆ**

ಜಗತ್ತಿನಲ್ಲಿ ಭಾರತವು ಮಾದರಿಯ ವಿಶಿಷ್ಟ ಮತ್ತು ವಿನೂತವಾದಂತಹ ಕಲೆ ಮತ್ತು ವಾಸ್ತುಶಿಲ್ಪಗಳನ್ನು ಹೊಂದಿದೆ. ಈ ಮಾದರಿಯ ಕಲೆ ಮತ್ತು ವಾಸ್ತುಶಿಲ್ಪದ ಕೆಲಸ ಮತ್ತು ಕಾರ್ಯಗಳು ಅಪಾರ ಪ್ರಮಾಣದಲ್ಲಿ ದೇವಾಲಯಗಳು ನಿರ್ಮಾಣಗೊಂಡಿರುವುದು ಹೆಚ್ಚಿನದಾಗಿಯೇ ಕಂಡುಬರುತ್ತವೆ. ಆದ್ದರಿಂದಲೇ ಕಲೆ ಮತ್ತು ವಾಸ್ತುಶಿಲ್ಪವು ಭಾರತದ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿಯೇ ಬೆಳೆದು ಬಂದಿರುತ್ತದೆ. ಈ ನೆಲೆಯಿಂದಲೇ ಕಲೆಯು ಒಂದು ದೇಶದಲ್ಲಿನ ಪರಂಪರೆಯ ಘನೀಭೂತ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಇದೇ ಅಲ್ಲದೇ ಅಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಯನ್ನು ರೂಪಿಸುವುದರಲ್ಲಿ ಪ್ರಾಚೀನ ಕಾಲದಿಂದಲೂ ಕೂಡ ತನ್ನದೇ ಆದಂತಹ ಮಹತ್ವವಾದ ಪಾತ್ರವನ್ನು ವಹಿಸುತ್ತಾ ಬಂದಿದೆ.

ಕಲೆ ಮತ್ತು ವಾಸ್ತುಶಿಲ್ಪಗಳು ಆಯಾಯ ಕಾಲಘಟ್ಟದ ಇತಿಹಾಸವನ್ನು ತಳಸ್ಪರ್ಶಿಯಾಗಿ ಗುರುತಿಸುವಿಕೆಯಲ್ಲಿ ಪ್ರಮುಖವಾದ ಆಧಾರಗಳೇ ಆಗಿವೆ. ಉತ್ತಮವಾದ ವಾಸ್ತುಶೈಲಿಯ ಮೂಲಕ ದೀರ್ಘಕಾಲದವರೆಗೆ ನಿಲ್ಲುವ ದೇವಾಲಯಗಳ ಘನ ಚರಿತ್ರೆಯು ವಿವಿಧ ಯುಗಗಳಲ್ಲಿ ಪ್ರಚಲಿತವಾಗಿದ್ದ ಧರ್ಮದ ವಿವಿಧ ಛಾಯೆಗಳನ್ನು ಭೇದಗಳನ್ನು, ಪ್ರಧಾನತೆಗಳನ್ನು ಹಾಗೂ ಪ್ರಾಂತೀಯ ಮನೋಧರ್ಮಗಳನ್ನು ಯಶಸ್ವಿಯಾಗಿ ಪ್ರತಿನಿಧಿಸುತ್ತದೆ. ಇಷ್ಟೇ ಅಲ್ಲದೇ ಆಯಾಯ ಕಾಲದಲ್ಲಿ ಜನವರ್ಗಗಳ ಅಭಿರುಚಿ, ಧರ್ಮದಲ್ಲಿ ನಂಬಿಕೆ, ಸಾಮಾಜಿಕ ಸಂಪ್ರದಾಯಗಳು, ಆಚರಣೆಗಳು ಹಾಗೂ ರೂಢಿಸಂಪ್ರದಾಯಗಳಂತಹ ವಿಷಯಗಳ ಮೇಲೆ ಬೆಳಕನ್ನು ಹೆಚ್ಚಿನ ರೀತಿಯಲ್ಲಿ ಚೆಲ್ಲುತ್ತವೆ.

ಭಾರತದ ಸಂಸ್ಕೃತಿಯ ಪರಂಪರೆಗೆ ಕಲೆ ಮತ್ತು ವಾಸ್ತುಶಿಲ್ಪವು ಕಾಲಾನುಕ್ರಮದಲ್ಲಿ ದೇಶವನ್ನು ಆಳಿರುವಂತಹ ರಾಜಮನೆತನಗಳು ಮತ್ತು ಮಹಾನ್ ದಾನಿಗಳಿಂದ ನಿರ್ಮಾಣಗೊಂಡಿರುವ ಶೈವ ಪರಂಪರೆಯ, ವೈಷ್ಣವ ಪರಂಪರೆಯ ದೇವಸ್ಥಾನಗಳು, ಜೈನ ಪರಂಪರೆಯ ಬಸದಿಗಳು ಮತ್ತು ಬೌದ್ಧ ಪರಂಪರೆಯ ವಿಹಾರಗಳ ಮೂಲಕ ಇಂದಿಗೂ ಉಳಿದು – ಬೆಳೆದುಕೊಂಡೇ ಬಂದಿರುತ್ತವೆ. ಆದ್ದರಿಂದಲೇ ಭಾರತೀಯ ಸಂದರ್ಭದಲ್ಲಿನ ಚರಿತ್ರೆಯೂ ಮಾತ್ರವೇ ಕಾಲಾನುಕ್ರಮದಲ್ಲಿ ರಾಜಮನೆತನಗಳ ಶ್ರೀಮಂತಿಯ ಪ್ರತಿಬಿಂಬದಂತೆ ಕಲೆಯೂ ಕೂಡ ವಿವಿಧ ರೀತಿಯಲ್ಲಿ ಬೆಳೆದುಬಂದಿದೆ. ಆಳುವ ಅರಸರ ಔದಾರ್ಯ, ಶ್ರೀಮಂತರ ಉದಾರ, ಕೆಲಸಗಾರರ ಕುಶಲತೆ, ಊರಿನವರ ಸಂಪತ್ತು ಇವನ್ನೆಲ್ಲಾ ಅವಲಂಬಿಸಿಯೇ ದೇವಾಲಯಗಳು, ಬಸದಿಗಳು ಮತ್ತು ವಿಹಾರಗಳು ನಿರ್ಮಿತವಾಗಿರುವುದು ಕೂಡ ಕಂಡುಬರುತ್ತದೆ. ಹೀಗೆ ನಿರ್ಮಿತವಾಗಿರುವ ದೇವಾಲಯಗಳು, ಬಸದಿಗಳು ಮತ್ತು ವಿಹಾರಗಳ ಬಗೆಗೆ ಆಯಾಯ ಪ್ರದೇಶದಲ್ಲಿನ ಜನವರ್ಗದವರಲ್ಲಿನ ಅಪಾರವಾದಂತಹ ಶ್ರದ್ಧೆ, ನಂಬಿಕೆ ಹಾಗೂ ಪರಂಪರಾನುಗತ ಆಚರಣೆಗಳ ಮೂಲಕ ಈ ದೇವಾಲಯಗಳು, ಬಸದಿಗಳು ಮತ್ತು ವಿಹಾರಗಳು ಬೆಳವಣಿಗೆಯನ್ನು ಹೊಂದುತ್ತವೆ. ಆದರೂ ಸಹ ಈ ಎರಡು ರೀತಿಯ ಆಲಯಗಳಿಗೂ ಕೂಡ ನಂಬಿಕೆ ಹಾಗೂ ಸಂಪ್ರದಾಯಗಳೇ ಪ್ರಧಾನವಾದಂತಹ ಬುನಾದಿ ಎನ್ನುವುದು ಗಮನಾರ್ಹ ವಿಷಯವೇ ಆಗಿದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿಯೇ ದೇವಾಲಯಗಳು, ಬಸದಿಗಳು ಮತ್ತು ವಿಹಾರಗಳು ಒಂದು ಮಾದರಿಯ ಧಾರ್ಮಿಕ

**Correspondence**
**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಧ್ಯಾಪಕರು,
ಸ.ಪ್ರ.ದ.ಕಾಲೇಜು ಚನ್ನಪಟ್ಟಣ,
ರಾಮನಗರ ಜಿಲ್ಲೆ, ಕರ್ನಾಟಕ,
ಭಾರತ

ಕೇಂದ್ರವಾಗುವುದರ ಜೊತೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಕಾಸಕ್ಕೂ ಹೆಚ್ಚು ಸಹಾಯವಾಗುತ್ತವೆ. ಹಾಗೆಯೇ ಅವುಗಳ ಅನುಷ್ಠಾನಕ್ಕೂ ಕೂಡ ನಾಂದಿಯಾಗಿರುತ್ತವೆ. ಕಾಲಾನುಕ್ರಮದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು, ಬಸದಿಗಳು ಮತ್ತು ವಿಹಾರಗಳು ಒಂದೇ ಮಾದರಿಯಲ್ಲಿ ಸ್ಥಳೀಯರಿಗೆ ನ್ಯಾಯ ದೊರಕಿಸಿಕೊಡುವಾಗ ನ್ಯಾಯಾಲಯವಾಗಿ ಸಾಮೂಹಿಕ ಸಮಸ್ಯೆಗಳನ್ನು ಚರ್ಚಿಸುವಾಗ; ಅವುಗಳು ವೈಚಾರಿಕ ಕೇಂದ್ರವಾಗಿಯೂ, ವಿವಾಹ ಮತ್ತಿತರ ಮಂಗಳ ಕೈಂಕಾರ್ಯಗಳಿಗೆ ಕಲ್ಯಾಣ ಮಂಟಪವಾಗಿಯೂ, ನೃತ್ಯ–ಸಂಗೀತಗಳಿಗೆ ಮನರಂಜನೆ ವೇದಿಕೆಯಾಗಿ, ತಾತ್ವಿಕ ವಿಚಾರ ವಿನಿಮಯಗಳಿಗೆ ಧಾರ್ಮಿಕ ಜಿಜ್ಞಾಸೆಗಳಿಗೆ ಬೋಧನ ಶಾಲೆಯಾಗಿ ಕೂಡ ಹೆಚ್ಚು ಹೆಚ್ಚು ಉಪಯೋಗವೇ ಆಗಿರುತ್ತವೆ. ಈ ರೀತಿಯಲ್ಲಿನ ಆತ್ಮೀಯ ಒಡನಾಟದಿಂದ ಜನರ ಆಲಯದ ಸಂಬಂಧವನ್ನು ಪ್ರತಿ ಹಂತದಲ್ಲಿಯೂ ಗಟ್ಟಿಗೊಳ್ಳುವಂತೆ ಈ ದೇವಾಲಯಗಳು, ಬಸದಿಗಳು ಮತ್ತು ವಿಹಾರಗಳು ಮಾಡುತ್ತವೆ. ದೇವಾಲಯಗಳು, ಬಸದಿಗಳು ಮತ್ತು ವಿಹಾರಗಳು ಒಂದು ನಾಡಿನ ಸಮಷ್ಠಿಯ ನಾಡಿಯನ್ನು ಹಿಡಿದು ನಡೆಸುತ್ತಿದ್ದ ಸಾಂಸ್ಕೃತಿಕ ಕೇಂದ್ರವಾಗಿಯೇ ಕಾರ್ಯನಿರ್ವಹಿಸುತ್ತವೆ.

ದೇವಾಲಯ, ಬಸದಿ ಮತ್ತು ವಿಹಾರಗಳೂ ಬಹುದೊಡ್ಡ ಸಾಂಸ್ಕೃತಿಕ ಭಂಡಾರವೇ ಆಗಿರುತ್ತಿದ್ದವು. ಏಕೆಂದರೆ, ಅದು ಧಾರ್ಮಿಕ ಸಂಸ್ಥೆ ಹಾಗೂ ಸಾಮಾಜಿಕ ಸಂಸ್ಥೆಯಾಗಿಯೂ ಕೂಡ ತನ್ನದೇ ಆದಂತಹ ರೀತಿಯಲ್ಲಿ ಕಾರ್ಯನಿರ್ವಹಿಸಿರುತ್ತದೆ. ಇದು ಹೆಚ್ಚು ಗ್ರಾಮೀಣ ಪ್ರದೇಶದಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಬದುಕನ್ನು ರೂಪಿಸುವಲ್ಲಿ ವಿಶಿಷ್ಟ ರೀತಿಯಲ್ಲಿನ ಪಾತ್ರವನ್ನು ವಹಿಸುತ್ತದೆ. ಇದು ಭಾರತದ ರಾಜ್ಯಾಡಳಿತದ ವ್ಯವಸ್ಥೆಯಲ್ಲಿ ಸ್ಥಳೀಯ ಸರ್ಕಾರದ ಒಂದು ಅಂಗವೇ ಆಗಿತ್ತು. ದೇವಾಲಯಗಳಲ್ಲಿ, ಬಸದಿಗಳಲ್ಲಿ ಮತ್ತು ವಿಹಾರಗಳಲ್ಲಿ ಹೆಚ್ಚಿನದಾಗಿಯೇ ಸ್ಥಳೀಯ ಜನರ ಮತೀಯ ಬದುಕನ್ನು ಹೆಚ್ಚು ರಕ್ಷಿಸುತ್ತಿತ್ತು. ಹಾಗೆಯೇ ದಕ್ಷಿಣ ಭಾರತ ಅದರಲ್ಲಿ ಕರ್ನಾಟಕ ರಾಜ್ಯದಲ್ಲಿನ ದೇವಾಲಯಗಳೂ, ಬಸದಿಗಳೂ ಮತ್ತು ವಿಹಾಗಳೂ ಜನಜೀವನದ ಅವಿಭಾಜ್ಯ ಅಂಗಗಳಾಗಿಯೇ ಕಾರ್ಯನಿರ್ವಹಿಸಿರುತ್ತವೆ. ಹೀಗೆ, ಒಂದು ನಾಡಿನ ಜನಸಮುದಾಯಗಳ ಸಂಸ್ಕೃತಿಯಲ್ಲಿ ತಳಮೂಲ ಸ್ಥಾನವನ್ನು ಪಡೆದುಕೊಂಡ ದೇವಾಲಯಗಳನ್ನು, ಬಸದಿಗಳನ್ನು ಮತ್ತು ವಿಹಾರಗಳನ್ನೂ ಕುರಿತಂತೆಯೇ ಇದುವರೆಗೆ ಸಾಕಷ್ಟು ಅಧ್ಯಯನಗಳು ಮತ್ತು ದೇವಾಲಯಗಳನ್ನು ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸುವ ಪ್ರಯತ್ನಗಳು ನಡೆದಿರುತ್ತವೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಪ್ರದೇಶದ ರಾವಂದೂರು ಗ್ರಾಮದಲ್ಲಿನ ಮಹಾಜನತೆಯೂ ತಾವು ಯಾವ ಯಾವ ಧಾರ್ಮಿಕ ನಂಬಿಕೆಯನ್ನು ಹೊಂದಿ, ಆಚರಿಸುತ್ತಿದ್ದರೋ ಆ ದೇವತೆಗಳ ಶಾಶ್ವತ ನೆನಪಿಗಾಗಿಯೇ ದೇವಾಲಯಗಳು ಮತ್ತು ಬಸದಿಯನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಈ ದೇವಾಲಯಗಳು ಮತ್ತು ಬಸದಿಯ ಕಲೆ ಮತ್ತು ವಾಸ್ತುಶಿಲ್ಪದ ಮಾದರಿಗಳನ್ನು ಈ ಮುಂದಿನಂತೆಯೇ ಸಾದರಪಡಿಸಲಾಗಿದೆ. ಭಾರತದ ಅನೇಕ ವೈವಿಧ್ಯಮಯವಾದ ರಾಜ್ಯಗಳಿಂದ ಕೂಡಿದ ಮಹಾನ್ ರಾಷ್ಟ್ರವಾಗಿದೆ. ಕರ್ನಾಟಕ ರಾಜ್ಯ ಭಾರತದ ಸಂಸ್ಕೃತಿಯ ಅಧಿಕೃತ ವಕ್ತಾರದಂತಿದೆ. ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಕರ್ನಾಟಕದ ಕೊಡುಗೆಯನ್ನು ನೀಡಿರುವುದು ಕಂಡುಬರುತ್ತದೆ. ಕನ್ನಡ ನಾಡನ್ನು ಕಾಲಾನುಕ್ರಮದಲ್ಲಿ ಆಳಿರುವ ಕಲಾ ಪ್ರೇಮದ ಕುರುಹಾಗಿ ರಾಜ್ಯದಾದ್ಯಂತ ಕಲೆ ಮೈಗೂಡಿದೆ. ಅದರಲ್ಲೂ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿನ ಸಾಂಸ್ಕೃತಿ ರಾಜಧಾನಿಯೇ ಎಂದು ಹೆಚ್ಚು ಪ್ರಖ್ಯಾತಿಗಳಿರುವ ಮೈಸೂರು ಜಿಲ್ಲೆಯಲ್ಲಿನ ಪಿರಿಯಾಪಟ್ಟಣ ತಾಲ್ಲೂಕು ಪ್ರದೇಶದ ರಾವಂದೂರು ಗ್ರಾಮದಲ್ಲಿಯೂ ಕೂಡ ಶೈವ ಮತ್ತು ಹಾಗೂ ವೈಷ್ಣವ ಪಂಥಗಳ ಪರಂಪರೆಯ ದೇವಾಲಯಗಳು, ಜೈನ ಪರಂಪರೆಯ ಬಸದಿಯ ನಿರ್ಮಾಣವೂ ಕಂಡುಬರುತ್ತದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಪ್ರದೇಶವು ಒಂದು ತಾಲ್ಲೂಕು ಕೇಂದ್ರವಾಗಿದ್ದು, ಇದು ತನ್ನದೇ ಆದಂತಹ ಒಂದು ಚಾರಿತ್ರಿಕ ಮಹತ್ವವನ್ನು ಪಡೆದ ತಾಣವಾಗಿದೆ. ಹಾಗೆಯೇ ಈ ಪ್ರದೇಶದಲ್ಲಿನ ರಾವಂದೂರು ಗ್ರಾಮವೂ ಸಹ ತನ್ನದೇ ಆದಂತಹ ಕಲೆ ಮತ್ತು ವಾಸ್ತುಶಿಲ್ಪದ ಅಪೂರ್ವ ನೆಲೆಯಾಗಿಯೇ ಆಗಿರುತ್ತದೆ. ಇದೇ ರಾವಂದೂರು ಗ್ರಾಮವು ಪಿರಿಯಾಪಟ್ಟಣ ಕೇಂದ್ರ ಪ್ರದೇಶದಿಂದ ಸರಿಸುಮಾರು 19 ಕಿ.ಲೋ ದೂರದಲ್ಲಿದೆ. ಈ ಗ್ರಾಮದಲ್ಲಿನ ಪ್ರಾಚೀನ ಕಾಲದ ಐದು ದೇವಾಲಯಗಳು ನಿರ್ಮಾಣಗೊಂಡಿರುವುದನ್ನು ಗುರುತಿಸಬಹುದು. ಇದು ಒಂದು ಹೋಬಳಿ ಕೇಂದ್ರವೂ ಕೂಡ ಆಗಿರುತ್ತದೆ. ಇಲ್ಲಿ ಸಮತಿ ತೀರ್ಥಂಕರರ ಬಸದಿ, ಈಶ್ವರ ದೇವಾಲಯ, ಸಿಡ್ಲು ಮಲ್ಲಿಕಾರ್ಜುನ ದೇವಾಲಯ, ವೀರಭದ್ರೇಶ್ವರ ದೇವಾಲಯ, ಮಲೇಮಾದೇಶ್ವರ ದೇವಾಲಯ, ಅರ್ಜುನೇಶ್ವರ ದೇವಾಲಯ, ಲಕ್ಷ್ಮೀನಾರಾಯಣ ದೇವಾಲಯ, ಗಣೇಶ ದೇವಾಲಯ, ರೇಣುಕಾ, ಸಂತೆ ಬಸಪ್ಪಗಾಳಿ ಬಸಪ್ಪ, ದೊಡ್ಡಮ್ಮ, ಚಿಕ್ಕಮ್ಮ ಮತ್ತು ಮಾರಮ್ಮನ ದೇವಾಲಯಗಳ ನಿರ್ಮಾಣದ ಮೂಲಕ ಈ ಗ್ರಾಮವು ದೇವಾಲಯಗಳ ಊರು ಎಂದೇ ಪ್ರಖ್ಯಾತಿಯನ್ನು ಗಳಿಸಿರುತ್ತದೆ.

ರಾವಂದೂರು ಗ್ರಾಮದ ಸರಿಸುಮಾರು ಕ್ರಿ.ಶ.17ನೇ ಶತಮಾನಕ್ಕೆ ಸೇರಿರುವ ಮಲ್ಲಿಕಾರ್ಜುನ ದೇವಸ್ಥಾನದ ಮುಂದೆ ನೆಟ್ಟಕಲ್ಲಿನಲ್ಲಿ ಸುಮಾರು 9 ಸಾಲುಗಳಲ್ಲಿ ಬರೆದಿರುವ ಒಂದು ಶಾಸನವಿದೆ. ಈ ಶಾಸನವು ಮೈಸೂರು ಸಂಸ್ಥಾನದ ಒಡೆಯರ ಆಳ್ವಿಕೆಯ ಕಾಲಕ್ಕೆ ಸೇರಿರುತ್ತದೆ ಎಂಬುದನ್ನು ಗುರುತಿಸಲಾಗಿದೆ. ಈ ಶಾಸನದ ಪ್ರಕಾರ; ಸ್ವಸ್ತಿ ದುರ್ಮಕಿಸಂಸಿದ ಶಿಡ್ಲು ಮಲ್ಲಿಕಾರ್ಜುನ ದೇವರಿಗೆ ತುಂಗದ ವೀರ ಬದ್ರಉಡರ ಚೆಂನಗ ಉಡರು ಕೊಟ್ಟಪ ಶಾಸನದ ಕ್ರಮಯೆಂಥೆಂದರೆಯಿ ದೇವರ ಕೂಡಿಗೆಗೆ ಎಂದು ಬರೆಸಲಾಗಿದೆ ಎಂಬುದು ತಿಳಿದುಬರುತ್ತದೆ. ಇಲ್ಲಿನ ಶಿಡ್ಲುಮಲ್ಲಿಕಾರ್ಜುನ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಏಕಕೂಟ ದ್ರಾವಿಡ ಶೈಲಿಯ ದೇವಾಲಯವಾಗಿದೆ. ಮೂಲಗರ್ಭಗುಡಿಯಲ್ಲಿ ಶ್ರೀಶಿಡ್ಲು ಮಲ್ಲಿಕಾರ್ಜುನ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಸುಕನಾಸಿ ಭಾಗದಲ್ಲಿ ಶಿವನ ವಾಹನವಾದ ನಂದಿಶಿಲ್ಪವಿದೆ. ಇದೇ ಅಲ್ಲದೆ ಗಣಪತಿ ಶಿಲ್ಪವನ್ನು ಇರಿಸಲಾಗಿದೆ. ಇದರ ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ನಾಲ್ಕು ಕಂಬಗಳ ಮಧ್ಯದಲ್ಲಿ ಸುಂದರವಾಗಿ ಕಡೆಯಲಾಗಿರುವ ಭುವನೇಶ್ವರಿಯನ್ನು ವಿಗ್ರಹವಿದೆ. ಮುಖಮಂಟಪದಲ್ಲಿ ನಾಲ್ಕು+ನಾಲ್ಕು ಕಂಬಗಳಿವೆ. ಅವುಗಳಲ್ಲಿ ಆರು ಕಂಬಗಳು ಗೋಡೆಗೆ ಸೇರಿವೆ. ಮುಖಮಂಟಪಕ್ಕೆ ಹೊಂದಿಕೊಂಡಂತೆ ದೇವಾಲಯದ ಮೇಲೆ ಮೂರು ಕೋಷ್ಠಗುಡಿಗಳಿವೆ. ದೇವಸ್ಥಾನದ ಗರ್ಭಗೃಹದ ಮೇಲೆ ಸುಮಾರು 5 ಅಂತಸ್ತಿನಿಂದ ಕೂಡಿವೆ. ದ್ರಾವಿಡ ಶೈಲಿಯ ವಿಮಾನವಿದೆ. ಅಲ್ಲದೆ ದೇವಸ್ಥಾನದ ನವರಂಗ ಮುಖಮಂಟಪದ ಭಾಗಗಳಲ್ಲಿ ಗಾರೆ ಗಚ್ಚಿನಿಂದ ಮಾಡಿದ ನಂದಿಯ ವಿಗ್ರಹಗಳಿವೆ. ಈ ದೇವಾಲಯವು

ಮೈಸೂರು ಒಡೆಯರ್ ಕಾಲದಲ್ಲಿಯೇ ನಿರ್ಮಾಣವಾಗಿದೆ ಎಂದು ತಿಳಿಯಬಹುದಾಗಿದೆ.

ಶಿವದೇವಾಲಯ ಅಥವಾ ಈಶ್ವರ ದೇವಾಲಯವು ರಾವಂದೂರು ಉತ್ತರ ದಿಕ್ಕಿಗೆ ಇದೆ. ಈ ದೇವಸ್ಥಾನವು ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದೆ. ಈಶ್ವರ ದೇವಸ್ಥಾನವು ಮೂಲಗರ್ಭಗುಡಿ 10*10 ಅಡಿ ಚದರ ಸುತ್ತಳತೆಯನ್ನು ಪಡೆದಿದೆ. ಮಧ್ಯಭಾಗದಲ್ಲಿ ಕಲ್ಲುಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಸುಂದರವಾಗಿ ಭುವನೇಶ್ವರಿಯನ್ನು ಕಡೆಯಲಾಗಿದೆ. ಗರ್ಭಗೃಹದ ಬಾಗಿಲು ಹೊಸ್ತಿಲು ಸರಳವಾದ ಕೆತ್ತನೆಗಳಿಂದ ಸುಕನಾಸಿಯು 8*8 ಅಡಿ ಚದರ ಸುತ್ತಳತೆಯನ್ನು ಹೊಂದಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಸುತ್ತಲೂ 12 ಗೋಡೆ ಕಂಬಗಳಿವೆ. ಒಟ್ಟು 16 ಕಂಬಗಳಿವೆ. ನವರಂಗದ ನಾಲ್ಕು ಕಂಬದ ಮಧ್ಯದಲ್ಲಿ ಭುವನೇಶ್ವರಿ ಇದೆ. ಈ ದೇವಾಲಯದ ಮೇಲ್ಭಾಗದಲ್ಲಿ ಮೂರು ಕೋಷ್ಠಗುಡಿಗಳಿವೆ. ದೇವಾಲಯದ ಮೇಲೆ ನಾಲ್ಕು ಮೂಲೆಗಳಲ್ಲಿ ಗಾರೆಯಿಂದ ಮಾಡಿರುವ ನಾಲ್ಕು ನಂದಿಯ ಗಾರೆಶಿಲ್ಪಗಳಿವೆ. ಗರ್ಭಗೃಹದ ಅಂಕಣದ ಮೇಲ್ಭಾಗದಲ್ಲಿ ಉಪಾನದಿಂದ ಹಿಡಿದು ವಿಮಾನದವರೆಗೆ ದ್ರಾವಿಡ ಶೈಲಿಯ ವಿಮಾನವನ್ನು ನಿರ್ಮಿಸಲಾಗಿದೆ. ಈ ವಿಮಾನವು ಸುಮಾರು 15 ಅಡಿ ಎತ್ತರವನ್ನು ಹೊಂದಿದೆ. ಈ ದೇವಾಲಯ ಪ್ರಾಯಶಃ ಚಂಗಾಳ್ವ ಅರಸರ ಕಾಲಕ್ಕೆ ಸೇರಿದ್ದು, ತದನಂತರ ಮೈಸೂರು ಒಡೆಯರ್ ಕಾಲಕ್ಕೆ ಸಾಕಷ್ಟು ಕೆಲಸಗಳು ನಡೆದಿವೆ ಎಂದು ಅಲ್ಲಿರುವ ವಾಸ್ತು ಕಲಾ ಬೆಳವಣಿಗೆಯಿಂದ ತಿಳಿಯಬಹುದಾಗಿದೆ. ದೇವಸ್ಥಾನದ ಮುಂದೆ ಒಂದು ನಂದಿಮಂಟಪ ಹಾಗೂ ಒಂದು ದೀಪಸ್ತಂಭವನ್ನು ಇರಿಸಲಾಗಿದೆ.

ಅರ್ಜುನೇಶ್ವರ ದೇವಾಲಯವು ರಾವಂದೂರು ಗ್ರಾಮದ ಉತ್ತರ ದಿಕ್ಕಿಗೆ ದಕ್ಷಿಣಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದು ಚೋಳರ ಕಾಲದ ಏಕಕೂಟ ದೇವಸ್ಥಾನವಾಗಿದೆ ಹಾಗೂ ದ್ರಾವಿಡ ಶೈಲಿಯನ್ನು ಹೊಂದಿದೆ. ಅರ್ಜುನೇಶ್ವರ ತಳವಿನ್ಯಾಸದಲ್ಲಿ ಮೂರು ಗರ್ಭಗೃಹ, ಮೂರು ಸುಕನಾಸಿ ಹಾಗೂ ವಿಶಾಲವಾದ ನವರಂಗವನ್ನು ಹೊಂದಿದೆ. ಇದನ್ನು ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದೆ. ಮೂಲಗರ್ಭಗೃಹವು 10*10 ಅಡಿ ಚದರ ಸುತ್ತಳತೆಯನ್ನು ಹೊಂದಿದೆ. ನಾಲ್ಕು ಮೂಲೆಯಲ್ಲಿಯೂ ನಾಲ್ಕು ಮೂಲೆ ಕಂಬಗಳಿವೆ. ಮಧ್ಯದಲ್ಲಿ ಕಲ್ಲುಪೀಠದ ಮೇಲೆ ಅರ್ಜುನೇಶ್ವರ ಶಿವಲಿಂಗವನ್ನು ಪ್ರತಿಷ್ಠಾಸಲಾಗಿದೆ. ಅದೇ ಮಾದರಿಯಲ್ಲಿ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಗರ್ಭಗುಡಿ ಮತ್ತು ಸುಕನಾಸಿಗಳಿವೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಈ ಕಂಬಗಳು ಚೋಳ ಮತ್ತು ಹೊಯ್ಸಳರ ಶೈಲಿಯನ್ನು ಹೊಂದಿವೆ. ಒಂದು ಗುಡಿಯಲ್ಲಿ ಗಣಪತಿಯನ್ನು ಮತ್ತೊಂದು ಗುಡಿಯಲ್ಲಿ ನಂದಿ (ಬಸವ) ನನ್ನು ಇರಿಸಲಾಗಿದೆ. ದಕ್ಷಿಣ ದಿಕ್ಕಿಗೆ ಪ್ರವೇಶದ್ವಾರವಿದ್ದು, ಅದಕ್ಕೆ ಹೊಂದಿಕೊಂಡಂತೆ ಮುಖಮಂಟಪ ಇದೆ. ಈ ಮುಖಮಂಟಪದ ಗೋಡೆಗೆ ಸೇರಿದಂತೆ ಎರಡು ಕಂಬಗಳು ಮತ್ತು ಮುಂಭಾಗದಲ್ಲಿ ಎರಡು ಕಂಬಗಳು ಕಂಡುಬರುತ್ತದೆ. ಈ ಕಂಬಗಳ ಮೇಲೆ ಹಲವಾರು ಉಬ್ಬುಶಿಲ್ಪಗಳಿವೆ. ಗಿಣಿ, ನವಿಲು, ಉಗ್ರನರಸಿಂಹ, ವ್ಯಾಳವಾರಿ, ನಂದಿ, ಕಮಲ, ಋಷಿಮುನಿ, ರಾಜ, ರಾಣಿ, ನೃತ್ಯಗಾರ ಹೀಗೆ ಹಲವಾರು ಉಬ್ಬುಶಿಲ್ಪಗಳಿವೆ. ದೇವಾಲಯದ ಮೇಲೆ ಮುಂಭಾಗದಲ್ಲಿ ಒಂದು ಕೋಷ್ಠಗುಡಿ ಇದ್ದು ಇದರಲ್ಲಿ ಸಿಮೆಂಟ್ ಗಾರೆಯಿಂದ ಕೋಷ್ಠವನ್ನು ನಿರ್ಮಿಸಿ ಅದರಲ್ಲಿ ಒಂದು ಗಣಪತಿ ಶಿಲ್ಪವನ್ನು (ವಿಗ್ರಹವನ್ನು) ಇರಿಸಿದ್ದಾರೆ. ದೇವಾಲಯದ ಸುತ್ತಲೂ ವ್ಯಾಳವಾರಿ ಮತ್ತು ಸಿಂಹಮುಖವಿರುವ ಪ್ರಾಣಿಗಳ ಕೆತ್ತನೆಯನ್ನು ಕಾಣಬಹುದಾಗಿದೆ. ಈ ದೇವಾಲಯ ಅಂದಿನ ಕಾಲಕ್ಕೆ ಈಶ್ವರ ದೇವಸ್ಥಾನವಾಗಿರಬಹುದು. ಆದರೆ ಜನರು ಇದನ್ನು ಅರ್ಜುನೇಶ್ವರ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯವು ಹಲವಾರು ಸಾರಿ ಜೀರ್ಣೋದ್ಧಾರಗೊಂಡಿದೆ. ಮತ್ತೆ ಮತ್ತೆ ಕೆಲವು ಭಾಗಗಳನ್ನು 1993ರಲ್ಲಿ ಜೀರ್ಣೋದ್ಧಾರ ಮಾಡಿದ್ದಾರೆ. ಈ ದೇವಾಲಯವು ಚೋಳರ ಹೊಯ್ಸಳರ ವಿಜಯನಗರ ಅರಸರು ಹಾಗೂ ಮೈಸೂರಿನ ಒಡೆಯರು ಸಹ ಕಾಲ ಕಾಲಕ್ಕೆ ಅಭಿವೃದ್ಧಿಪಡಿಸಿದ್ದಾರೆಂದು ತಿಳಿಯಬಹುದಾಗಿದೆ.

ರಾವಂದೂರು ಗ್ರಾಮದಲ್ಲಿನ ಈ ದೇವಾಲಯಗಳ ಪರಿಸರದಲ್ಲಿಯೇ ಸ್ವಲ್ಪ ಅಂತರದಲ್ಲಿ ಒಂದು ಜೈನ ಬಸದಿ ಇದೆ. ಈ ಬಸದಿಯು ಗಂಗರ ಕಾಲದ್ದು ಎಂದು ತಿಳಿಯಬಹುದಾದರೂ ಕೂಡಾ ಆಯಾಯ ಕಾಲಘಟ್ಟದಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಈ ಬಸದಿಯು ಪ್ರಾಚೀನ ಕಾಲದ್ದಾಗಿದ್ದು, ಇದು ಕೂಡ ದ್ರಾವಿಡ ಶೈಲಿಯನ್ನು ಹೊಂದಿರುವ ಒಂದು ಏಕಕೂಟ ಬಸದಿಯಾಗಿದೆ. ಪ್ರಾಯಶಃ ಈ ಬಸದಿಯನ್ನು ಕಟ್ಟಿಸಿದ ಅನಂತರ ಅರ್ಜುನೇಶ್ವರ ದೇವಸ್ಥಾನವನ್ನು ಕಟ್ಟಿರಬಹುದು. ಏಕೆಂದರೆ, ಅದರ ವಾಸ್ತು ಶೈಲಿಯಿಂದ ಗುರುತಿಸಬಹುದಾಗಿದೆ. ಈ ಬಸದಿಯಲ್ಲಿ ತಳವಿನ್ಯಾಸದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗವನ್ನು ಹೊಂದಿದೆ. ಆದರೆ ಈಗ ಈ ಬಸದಿಯಲ್ಲಿ ಒಂದು ಪಾರ್ವತಿ ಶಿಲ್ಪವಿದೆ. ಆದರೆ ಈ ಶಿಲ್ಪದ ತಲೆ ಈಗ ಕಾಣುತ್ತಿಲ್ಲ. ಅಲ್ಲದೆ ಈ ಜೈನ ಬಸದಿಯ ಗರ್ಭಗುಡಿಯಲ್ಲಿ ಏನಾದರೂ ನಿಧಿ ದೊರೆಯಬಹುದೆಂದೂ ಗರ್ಭಗುಡಿಯನ್ನು ಅಗೆದು ಹಾಕಿದ್ದಾರೆ. ಆದರೆ ಬಸದಿಯ ಹೊರಭಾಗದಲ್ಲಿ ಚೋಳರ ಕಾಲಕ್ಕೆ ಸೇರಿಸಬಹುದಾದ ವಾಸ್ತುಶೈಲಿಯನ್ನು ಹೊಂದಿರುವಂತಹ ಅರೆಕಂಬಗಳು ಮತ್ತು ಮಂಟಪದ ರೀತಿಯ ಕೋಷ್ಠಗಳಿವೆ. ಅಲ್ಲದೆ ಮೈಸೂರು ಒಡೆಯರ್ ಕೂಡ ಜೈನರನ್ನು ಜೈನಧರ್ಮೀಯರನ್ನು ಗೌರವಿಸುತ್ತಿದ್ದರು. ಈ ಬೆಳವಣಿಗೆಯಿಂದ ಮೈಸೂರು ಅರಸರ ಕಾಲದಲ್ಲಿ ಸ್ವಲ್ಪ ಸುಧಾರಣೆ ಮಾಡಿದ್ದಾರೆ.

ಒಟ್ಟಾರೆಯಾಗಿ ರಾವಂದೂರು ಗ್ರಾಮವು ಶೈವ, ವೀರಶೈವ, ವೈಷ್ಣವ, ಶ್ರೀವೈಷ್ಣವ, ಜೈನ ಹಾಗೂ ಜನಪದ ಧರ್ಮಗಳ ಪ್ರಸ್ತುತ ಕೇಂದ್ರವಾಗಿದ್ದಂತೆ ತಿಳಿದುಬರುತ್ತದೆ. ರಾವಂದೂರಿನಲ್ಲಿ ಸುಮತಿ ತೀರ್ಥಂಕರ ಬಸದಿ, ಈಶ್ವರ ದೇವಾಲಯ, ಸಿದ್ಲುಮಲ್ಲಿಕಾರ್ಜುನ ದೇವಾಲಯ, ವೀರಭದ್ರೇಶ್ವರ, ಮಲೆಮಾದೇಶ್ವರ, ಅರ್ಜುನೇಶ್ವರ, ಲಕ್ಷ್ಮೀನಾರಾಯಣ, ಗಣೇಶ, ರೇಣುಕ ಸಂತೆ ಬಸಪ್ಪಗಳ ಬಸಪ್ಪ, ದೊಡ್ಡಮ್ಮ, ಚಿಕ್ಕಮ್ಮ ಮತ್ತು ಮಾರಮ್ಮನ ದೇವಾಲಯಗಳಿದ್ದು, ರಾವಂದೂರು ದೇವಾಲಯಗಳ ಊರು ಎನಿಸಿಕೊಂಡಿದೆ. ಒಟ್ಟಾರೆ ಮೈಸೂರು ಅರಸರು ಈ ಭಾಗದ ದೇವಾಲಯಗಳಿಗೆ ಸಹಾಯ ಹಸ್ತ ನೀಡಿದ್ದಾರೆ ಎಂದು ತಿಳಿದುಬರುತ್ತದೆ.

**ಅಧ್ಯಯನದ ಗ್ರಂಥಗಳು**

1. ಡಾ.ಪಿ.ಕೆ.ರಾಜಶೇಖರ್, (ಸಂ), *ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್,* ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2010
2. ಹಾ.ಮಾ.ನಾಯಕ, (ಸಂ), *ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–4, ಪಿರಿಯಾಪಟ್ಟಣ ತಾಲ್ಲೂಕು,* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1975

3. ಡಾ.ಪಿ.ಕೆ.ರಾಜಶೇಖರ್ ಮತ್ತು ಎಸ್.ಟಿ.ದಕ್ಷಿಣಮೂರ್ತಿ, *ಅಮೃತಕಾವಲ್, ಪಿರಿಯಾಪಟ್ಟಣ ತಾಲ್ಲೂಕು ಮಾಹಿತಿ ಕೋಶ*
4. ಡಾ.ಬಿ.ಬಸವರಾಜು ತಗರಪುರ, *ಶಿವಸಂಪದ ಕಲೆ ಮತ್ತು ವಾಸ್ತುಶಿಲ್ಪ ಒಂದು ಅಧ್ಯಯನ*
5. ಡಾ.ಹಯವದನರಾವ್, *ಮೈಸೂರು ಜಿಲ್ಲಾ ಗ್ಯಾಸೆಟಿಯರ್,* ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 1988
6. ಡಾ.ಮಳಲಿ ವಸಂತ ಕುಮಾರ (ಸಂ), *ವಜ್ರದೀಪ್ತಿ – ಮೈಸೂರು ಜಿಲ್ಲೆ ಮತ್ತು ವಾಸ್ತುಶಿಲ್ಪ ಕಲೆ*
7. ಆರ್.ಮಹದೇವು ಚಿಕ್ಕಮಳಲಿ, *ಶಿವಸಂಪದ ಬೆಟ್ಟದಪುರದ ಭೌಗೋಳಿಕತೆ*
8. ಡಾ.ಬಿ.ಬಸವರಾಜು ತಗರಪುರ, *ಐತಿಹ್ಯ ದರ್ಶನ, ಪಿರಿಯಾಪಟ್ಟಣ ತಾಲ್ಲೂಕು ಮಾಹಿತಿ ಕೋಶ*
9. ಎನ್.ಎಸ್.ಅಣ್ಣಯ್ಯ ನವಿಲೂರು, *ಶಿವಸಂಪದ, ಹೊನ್ನೂರಯ್ಯನ ಗುಡ್ಡ*